
मन की बात 100

MANN KI BAAT 100

# ಮನ್ ಕೀ ಬಾತ್

ಸಂಪುಟ 3



# MANN KI BAAT
## VOL.3

**Script Writers**
Sarda Mohan and Shashi Mukherjee

**Illustrations and Cover Art**
Dilip Kadam

**Assistant Artist**
Ravindra Mokate

**Production**
Amar Chitra Katha

**Layout Artist**
Tarangini Mukherjee

**Published by**
Amar Chitra Katha Pvt. Ltd

**Kannada**

ISBN - 978-81-19242-93-1

Amar Chitra Katha Pvt. Ltd, June 2023


© Ministry of Culture, Govt of India, June 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**, a unique learning platform that brings these stories to your school with a range of workshops. Find out more at **www.acklearn.com** or write to us at **acklearn@ack-media.com**.

ನಮ್ಮ ದೇಶಕ್ಕೆ ಬಹಳ ಪುರಾತನವಾದ ಮತ್ತು ಧೀರ್ಘವಾದ ಜ್ಞಾನ ಪರಂಪರೆಯಿದೆ. ಆದರೆ, ಅಧುನಿಕತೆಯ ಧಾವಂತದಲ್ಲಿ ನಾವು ಅದನ್ನು ಮರೆತಿದ್ದೇವೆ.

ಅಧುನಿಕತೆಯನ್ನು ಒಪ್ಪಿಕೊಂಡು ಮುನ್ನಡೆಯುವುದು ಎಷ್ಟು ಮುಖ್ಯವೋ ನಮ್ಮ ಪುರಾತನರು ಬಿಟ್ಟು ಹೋದ ಬಳುವಳಿಯನ್ನು ನಾವು ತಿಳಿಯುವುದು ಅಷ್ಟೇ ಮುಖ್ಯವಾಗಿದೆ.

ಇಂತಹ ಯೋಚನಾ ಕ್ರಮವೇ ಮಾಲಿಂಗ ಗೊಂಬುವಿಗೆ ಮರದದಿಂದ ಅಲ್ಲದೇ ಶುಗು ಶೆಂಗ್ ಎಂಬ ಪೊದೆಯ ತೊಗಟೆಯಿಂದ ಕಾಗದ ತಯಾರಿಸುವ ಸಾವಿರ ವರ್ಷದ ಹಿಂದಿನ ಕಲೆಗೆ ಮತ್ತೆ ಮರು ಜೀವ ಕೊಡಲು ಸಾಧ್ಯವಾಗಿಸಿದ್ದು.



ಮನ್ ಕೀ ಬಾತ್‌ನ ಈ ಮೂರನೆಯ ಸಂಚಿಕೆಯಲ್ಲಿ ಅರುಣಾಚಲ ಪ್ರದೇಶದ ಮೊನ್ಪಾ ಬುಡಕಟ್ಟು ಜನ ಕಾಗದವನ್ನು ತಯಾರಿಸುತ್ತಿದ್ದ ಪರಿಸರ ಸ್ನೇಹಿ ವಿಧಾನಕ್ಕೆ ಮರುಜೀವ ಕೊಟ್ಟ ಈ ವಿಶಿಷ್ಟ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳೋಣ.

ನೀವು ಎಂದಾದರೂ ನೀರಿನ ಆಂಬುಲೆನ್ಸ್ ಬಗ್ಗೆ ಕೇಳಿದ್ದೀರಾ? ತಾರಿಖ್ ಅಹಮದ್ ಪಟ್ಲೂ ಎನ್ನುವವರು ಕೋವಿಡ್-19 ಮಾಮಾರಿಯಿಂದಾಗಿ ಲಾಕ್‌ಡೌನ್ ಆಗಿದ್ದ ಸಂದರ್ಭದಲ್ಲಿ ಕಾಶ್ಮೀರದ ಸುಂದರ ದಾಲ್ ಲೇಕ್'ನಲ್ಲಿ ನೀರಿನ ಆಂಬುಲೆನ್ಸ್ ಸೇವೆಯನ್ನು ನಡೆಸುತಿದ್ದ ಬಗ್ಗೆ ನಾವು ತಿಳಿದುಕೊಳ್ಳೋಣ.


ನಿಮಗೆ ಸುರಕ್ಷಿತವೆನ್ನಿಸುವುದರ ಹೊರತಾಗಿ ಹೆಚ್ಚು ಸವಾಲಿನದನ್ನು ಮಾಡುವುದು ಅಷ್ಟು ಸುಲಭವಲ್ಲ. ಅದಕ್ಕೆ ಕಷ್ಟಗಳನ್ನು ಎದುರಿಸುವ ಧೈರ್ಯ, ಧೃಡ ನಿರ್ಧಾರ ಮತ್ತು ಇಚ್ಛಾಶಕ್ತಿಗಳು ಬೇಕಾಗುತ್ತವೆ. ಆದರೆ, ಒಮ್ಮೆ ಇದನ್ನು ನೀವು ಮಾಡಿದಿರೆಂದರೆ ಸಾಕು- ನಿಮಗೆ ಅಪಾರವಾದ ಸಂತೃಪ್ತಿ ದೊರಕುತ್ತದೆ. ಮಾಮೂಲು ಯೋಚನಾಕ್ರಮಗಳನ್ನು ಮೀರಿ ಹೊಸದಾಗಿ ಯೋಚಿಸಲು ಸಾಧ್ಯವಾಗುತ್ತದೆ. ನಿಮ್ಮ ಹೃದಯದ ಮಾತನ್ನು ಕೇಳಿ ಕ್ರಿಯಾಶೀಲರಾಗುವಂತೆ ಮಾಡುತ್ತದೆ.

ನನ್ನ ಪ್ರೀತಿ ಮತ್ತು ಶುಭ ಹಾರೈಕೆಗಳು ಸದಾ ನಿಮ್ಮ ಮೇಲೆ ಇದ್ದೇ ಇರುತ್ತವೆ.


# ಪರಿವಿಡಿ


| | | |
|---|---|---|
| 1 | ಮಾಲಿಂಗ್ ಗೊಂಬು | 3 |
| 2 | ಉರ್ಗೇನ್ ಫುಂಟ್ಸೊಗ್ | 6 |
| 3 | ಶ್ರೀನಿವಾಸ್ ಪಡಕಂಡ್ಲ | 9 |
| 4 | ಭಾಗ್ಯಶ್ರೀ ಸಾಹು | 12 |
| 5 | ರಾಮ್ ಲೋಟನ್ ಕುಶ್ವಾಹಾ | 14 |
| 6 | ತಾರಿಕ್ ಅಹ್ಮದ್ ಪಟ್ಲೂ | 17 |
| 7 | ಸಂಜಯ್ ಕಚ್ಛಾಪ್ | 19 |
| 8 | ಹರಿಶ್ಚಂದ್ರ ಸಿಂಗ್ | 22 |
| 9 | ಸಚ್ಚಿದಾನಂದ ಭಾರತಿ | 24 |
| 10 | ಸಿಕಾರಿ ಟಿಸ್ಸೊ | 27 |
| 11 | ಪಿ.ಎಂ. ಮುರುಗೇಶನ್ | 30 |


# ಮಾಲಿಂಗ್ ಗೊಂಬು




* ಕಾಗದದ ತಿರುಳು ಮತ್ತು ಅಂಟಿನ ಮಿಶ್ರಣವನ್ನು ಸಾಮಾನ್ಯವಾಗಿ ಪೇಪಿಯರ್ ಮ್ಯಾಷೆ ಎಂದು ಕರೆಯಲಾಗುತ್ತದೆ.




*ಮರದ ಬೂದಿ ಮಿಶ್ರಿತ ನೀರು



ಯುವಕರಾದ ನಿಮಗಾಗಿ ನಾನು ಒಂದು ಫೋರಮ್ ಅನ್ನು ರಚಿಸುತ್ತಿದ್ದು, ನೀವು ಅದಕ್ಕೆ ಸೇರಬೇಕೆಂದು ನಾನು ಬಯಸುತ್ತೇನೆ.
ಅದರಿಂದೇನು ಪ್ರಯೋಜನ?
ನಮ್ಮ ಬುಡಕಟ್ಟು ಮತ್ತು ನಮ್ಮ ಸಂಪ್ರದಾಯಗಳ ಒಳಿತಿಗಾಗಿ ನಾವು ಕೆಲಸ ಮಾಡೋಣ.
ಮಾಲಿಂಗ್ 'ಯೂತ್ ಆಕ್ಷನ್ ಫಾರ್ ಟ್ರೈಬಲ್ ವೆಲ್ಫೇರ್' ಎಂಬ ಫೋರಮ್ ಅನ್ನು ರಚಿಸಿದರು. ಅನೇಕ ಸಮಾನ ಮನಸ್ಕರು ಇದಕ್ಕೆ ಸೇರಿಕೊಂಡರು.
ಮನ್ ಕೀ ಬಾತ್‌ನಲ್ಲಿ ಮಾಲಿಂಗ್ ಅವರ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿಯವರು ಶ್ಲಾಘಿಸಿದರು.
ಮೊನ್ಪಾಗಳು ಈ ಕಾಗದವನ್ನು ಶುಗು ಶೆಂಗ್ ಎಂಬ ಗಿಡದ ತೊಗಟೆಯಿಂದ ತಯಾರಿಸುತ್ತಾರೆ, ಆದ್ದರಿಂದ ಈ ಕಾಗದವನ್ನು ತಯಾರಿಸಲು ಮರಗಳನ್ನು ಕತ್ತರಿಸಬೇಕಾಗಿಲ್ಲ. ಇದಲ್ಲದೆ, ಇದರ ತಯಾರಿಕೆಯಲ್ಲಿ ಯಾವುದೇ ರಾಸಾಯನಿಕವನ್ನು ಬಳಸಲಾಗುವುದಿಲ್ಲ. ಹೀಗೆ ಈ ಕಲೆಗೆ ಕಾಯಕಲ್ಪ ನೀಡಿ ತಮ್ಮ ಬುಡಕಟ್ಟು-ಜನರಿಗೆ ಉದ್ಯೋಗ ನೀಡುವ ಪ್ರಯತ್ನವನ್ನು ಸ್ಥಳೀಯ ಸಮಾಜ ಸೇವಕ ಗೊಂಬು ಮಾಡಿದ್ದಾರೆ.
ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾದ ವಿನಯ್ ಕುಮಾರ್ ಸಕ್ಸೇನಾ ರವರು ಮೊನ್ ಶುಗು ಬಗ್ಗೆ ತಿಳಿದುಕೊಳ್ಳಲು ಉತ್ಸುಕರಾಗಿದ್ದರು.
ಕಾಗದವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ನಾವು ಇದರ ಘಟಕವೊಂದನ್ನು ಸ್ಥಾಪಿಸಬೇಕಾಗಿದೆ.
ಇದನ್ನು ಬಹಳ ಹಿಂದೆಯೇ ಪ್ರಯತ್ನಿಸಲಾಗಿತ್ತು ಆದರೆ ಭೂಪ್ರದೇಶ ಮತ್ತು ಕಳಪೆ ಮೂಲಸೌಕರ್ಯದಿಂದಾಗಿ ಇದು ಸುಲಭವಲ್ಲ.
ಎಲ್ಲಾ ಸಮಸ್ಯೆಗಳ ಹೊರತಾಗಿಯೂ ಸಕ್ಸೇನಾರವರು ತವಾಂಗ್‌ನಲ್ಲಿ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಸಹಾಯ ಮಾಡಿದರು.
ನೀವು ಸಂತೋಷವಾಗಿದ್ದೀರಾ?
ತುಂಬಾ ಸಂತೋಷವಾಗುತ್ತಿದೆ, ವಿನಯ್! ನಾವು ದಿನಕ್ಕೆ 500 ಕಾಗದದ ಹಾಳೆಗಳನ್ನು ಮಾರಾಟ ಮಾಡುತ್ತಿದ್ದೇವೆ! ಈ ಕಾಗದದ ಮೇಲಿನ ಬರವಣಿಗೆಯನ್ನು 5,000 ವರ್ಷಗಳವರೆಗೆ ಸಂರಕ್ಷಿಸಬಹುದು ಎಂಬುದು ನಿಮಗೆ ತಿಳಿದಿದೆಯೇ?
ಒಂದಷ್ಟು ಪ್ರಯತ್ನದಿಂದ ಭಾರತದ ಸ್ಥಳೀಯ ಕಲೆ ಮತ್ತು ಕರಕುಶಲತೆಯನ್ನು ಸಂರಕ್ಷಿಸಬಹುದು ಎಂಬುದನ್ನು ಮೊನ್ ಶುಗು ಕಥೆಯು ತೋರಿಸುತ್ತದೆ.

# ಉರ್ಗೇನ್ ಫುಂಟ್ಸಾಗ್




*ಲಡಾಖ್ ಭಾಷೆಯಾದ ಭೋಟಿಯಲ್ಲಿ, ತಾಯಿ
^ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್


** ಭೋಟಿ ಭಾಷೆಯಲ್ಲಿ ಅಕ್ಕ





*ಗಾಜು ಅಥವಾ ಪ್ಲಾಸ್ಟಿಕ್‌ನಿಂದ ಮಾಡಿದ ರಚನೆಯು ಹವಾಮಾನ-ನಿಯಂತ್ರಿತ ಪರಿಸ್ಥಿತಿಗಳನ್ನು ಅನುಮತಿಸುತ್ತದೆ

^ ಸಾವಯವ ಗೊಬ್ಬರ


** ಮಣ್ಣನ್ನು ಶಾಖ, ಶೀತ ಅಥವಾ ಶುಷ್ಕತೆಯಿಂದ ರಕ್ಷಿಸಲು ಒಣಹುಲ್ಲು ಮತ್ತು ಇತರ ಗಿಡಗಳಿಂದ ನೆಲವನ್ನು ಮುಚ್ಚುವುದು



ಉರ್ಗೇನ್ ಅವರ ಯಶಸ್ಸಿನ ಸುದ್ದಿ ದೂರದವರೆಗೆ ಹರಡಿತು.
ನೀವು 14,000 ಅಡಿ ಎತ್ತರದಲ್ಲಿ ಕಲ್ಲಂಗಡಿ ಬೆಳೆಯುತ್ತಿದ್ದೀರಿ! ಇದು ನಂಬಲಸಾಧ್ಯ!
ಹಾ ಹಾ! ಅದು ನಿಮ್ಮ ಮುಂದೆಯೇ ಇದೆ.
ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಕರೆಂಟ್ ಮೈಕ್ರೋಬಯಾಲಜಿ ಅಂಡ್ ಅಪ್ಲೈಡ್ ಸೈನ್ಸಸ್ 2019 ರಲ್ಲಿ ಅವರ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಿತು.
ಅವರ ಶ್ರಮವನ್ನು ಮೆಚ್ಚಿದ ಸರ್ಕಾರ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.
ATE AWARDS
ಬಿಬಿಸಿ ಮತ್ತು ನ್ಯಾಷನಲ್ ಜಿಯಾಗ್ರಫಿಕ್‌ನಂತಹ ಅಂತರರಾಷ್ಟ್ರೀಯ ಸಂಸ್ಥೆಗಳು ಅವರ ಕೆಲಸವನ್ನು ಶ್ಲಾಘಿಸಿವೆ.
2016 ರಲ್ಲಿ ಇವರು ತಮ್ಮ ಸಹೋದರ ಸ್ಟ್ಯಾಂಜಿನ್ ಅವರ ಸಾಕ್ಷ್ಯಚಿತ್ರ 'ದಿ ಶೆಫರ್ಡ್ಸ್ ಆಫ್ ದಿ ಗ್ಲೇಸಿಯರ್ಸ್' ನಲ್ಲಿ ಕಾಣಿಸಿಕೊಂಡರು.
DHAR INTE FILM
ಈ ಚಿತ್ರವು 17 ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿದೆ.
ತನ್ನ ಕುಟುಂಬದ ಸಹಾಯದಿಂದ, ಉರ್ಗೇನ್ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ, ಜಾನುವಾರುಗಳನ್ನು ನಿರ್ವಹಿಸುತ್ತಾರೆ ಮತ್ತು ಹೋಮ್‌ಸ್ಟೇ ನಡೆಸುತ್ತಾರೆ.
ನನ್ನ ಕುಟುಂಬವಿಲ್ಲದೆ ನಾನು ಏನೂ ಅಲ್ಲ - ನನ್ನ ಸಹೋದರಿ ತ್ಸೆರಿಂಗ್, ನನ್ನ ಸಹೋದರ ಸ್ಟ್ಯಾಂಜಿನ್ ಮತ್ತು ನನ್ನ ಪತ್ನಿ ಚಂಬಾ. ನಾನು ನಿಮ್ಮೆಲ್ಲರನ್ನು ಪ್ರೀತಿಸುತ್ತೇನೆ.
ನಿರಂತರವಾಗಿ ಹೊಸತನ ಮತ್ತು ದೊಡ್ಡ ಕನಸು ಕಾಣುವವರಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಉರ್ಗೇನ್ ಸಾಬೀತುಪಡಿಸಿದ್ದಾರೆ.


# ಶ್ರೀನಿವಾಸ ಪದಕಂಡ್ಲ





ಇದು ಅದ್ಭುತವಾಗಿದೆ! ನಾನು ಇನ್ನೂ ಒಂದನ್ನು ಸೇರಿಸುತ್ತೇನೆ.
ಅದನ್ನು ಮುಟ್ಟಬೇಡಿ! ಅದು ಮುರಿಯುತ್ತದೆ.
ಸರ್, ಉಳಿದ ಸೀಮೆಸುಣ್ಣದ ತುಂಡುಗಳಿಂದ ನಾವು ಏನನ್ನು ಮಾಡಿದ್ದೇವೆ ಎಂದು ನೋಡಿ!
ಇದನ್ನು ಮೆಚ್ಚಬೇಕಾಗಿದ್ದೇ ಚರಣ್. ಶ್ರೀನಿವಾಸ್ ಪದಕಂಡ್ಲ ಎಂಬ ಕಲಾವಿದರೊಬ್ಬರು ಇದ್ದು, ಅವರು ಸ್ಕ್ರ್ಯಾಪ್ ಮೆಟಲ್ ಬಳಸಿ ಅದ್ಭುತ ಶಿಲ್ಪಗಳನ್ನು ರಚಿಸಿದ್ದಾರೆ. ಅವರ ಬಗ್ಗೆ ಕಥೆಯನ್ನು ಹೇಳುತ್ತೇನೆ.
ಶ್ರೀನಿವಾಸ್ ಬೆಳೆದದ್ದು ಆಂಧ್ರಪ್ರದೇಶದ ವಿಜಯವಾಡದಲ್ಲಿ. ಅವರ ಶಾಲಾ ದಿನಗಳಲ್ಲಿ -
ಮತ್ತೆ ಏನನ್ನಾದರೂ ಮಾಡುತ್ತಿದ್ದೀಯಾ?
ಕಾಗದ ಮತ್ತು ರಟ್ಟಿನ ನಂತರ, ನಾನೀಗ ಈಗ ದೋಣಿ ಮಾಡಲು ಲೋಹದ ತಂತಿಗಳು ಮತ್ತು ಮರದ ತುಂಡುಗಳನ್ನು ಬಳಸಲು ಪ್ರಯತ್ನಿಸುತ್ತಿದ್ದೇನೆ.
ವರ್ಷಗಳು ಕಳೆದಂತೆ, ಸೃಜನಶೀಲ ಕಲೆಯ ಬಗ್ಗೆ ಶ್ರೀನಿವಾಸ್ ಅವರಿದ್ದ ಆಸಕ್ತಿ ಇಮ್ಮಡಿಯಾಯಿತು.
ನನಗೆ ಲಲಿತಕಲೆ ಕಲಿಯಬೇಕು ಅಮ್ಮಾ.
ನಿನಗೆ ನೀನು ಏನಾಗಬೇಕು ಎಂಬ ಬಗ್ಗೆ ಸ್ಪಷ್ಟ ನಿಲುವು ಇದೆ ಎಂದು ನಾನು ಭಾವಿಸುತ್ತೇನೆ!
ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಶ್ರೀನಿವಾಸ್ ತಮ್ಮ ಬ್ಯಾಚುಲರ್ ಆಫ್ ಆರ್ಟ್ಸ್ ಪದವಿಯನ್ನು ಪೂರ್ಣಗೊಳಿಸಿದರು.
ವರ್ಷಗಳು ಕಳೆದಂತೆ, ಶ್ರೀನಿವಾಸ್ ಕೆಲಸ ಮಾಡುವುದಕ್ಕೋಸ್ಕರ ಬೇಡದೆ ಬಿಸಾಕಿದ ವಸ್ತುಗಳನ್ನು ಹುಡುಕುವುದನ್ನು ಮುಂದುವರೆಸಿದರು. ಮೆಕ್ಯಾನಿಕ್ ಅಂಗಡಿಯಲ್ಲಿ ಒಂದು ದಿನ -
ಈ ಸ್ಕ್ರ್ಯಾಪ್ ವಸ್ತುಗಳನ್ನು ನೀವು ಏನು ಮಾಡುತ್ತೀರಿ?
ಅವುಗಳನ್ನು ಜಂಕ್ ಯಾರ್ಡ್‌ಗೆ ಕಳುಹಿಸಲಾಗುತ್ತದೆ.


ನಾನು ಸ್ಕ್ರ್ಯಾಪ್ ಲೋಹವನ್ನು ಖರೀದಿಸಲು ಬಯಸುತ್ತೇನೆ. ನಾನು ಅದನ್ನು ಸದುಪಯೋಗ ಪಡಿಸಿಕೊಳ್ಳಲಿದ್ದೇನೆ.
ಸ್ವಲ್ಪವೇ ದಿನಗಳಲ್ಲಿ -
ಇದು ಹೇಗೆ ಕಾಣುತ್ತದೆ?
ಇದು ಅದ್ಭುತವಾಗಿದೆ
ಶ್ರೀನಿವಾಸ್ ಅವರು ಸ್ಕ್ರ್ಯಾಪ್ ಮೆಟಲ್, ಮರ ಮತ್ತು ಕಲ್ಲು ಬಳಸಿ ಶಿಲ್ಪಗಳನ್ನು ಮಾಡಲು ಪ್ರಾರಂಭಿಸಿದರು.
ಶ್ರೀನಿವಾಸ್, ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಲಲಿತಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಮತ್ತೆ ಕೆಲವೇ ದಿನಗಳಲ್ಲಿ -
ಆಂಧ್ರ ವಿಶ್ವವಿದ್ಯಾಲಯದಿಂದ ಸೃಜನಾತ್ಮಕ ಶಿಲ್ಪಕಲಾ ಶಿಬಿರವನ್ನು ಆಯೋಜಿಸಲಾಗುತ್ತಿದೆ, ನೀವು ಹೋಗುವಿರಾ....
ಖಂಡಿತಾ, ನನ್ನ ಕೌಶಲ್ಯಗಳನ್ನು ಪ್ರದರ್ಶಿಸಲು ಇದು ಉತ್ತಮ ಅವಕಾಶವಾಗಿದೆ.
ಶ್ರೀನಿವಾಸ್ ದೇಶದಾದ್ಯಂತ ಶಿಲ್ಪಕಲಾ ಶಿಬಿರಗಳು ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು.
ಕೆಲವು ವರ್ಷಗಳ ನಂತರ -
ವಿಎಂಸಿ* ಶಿಲ್ಪಕಲಾ ಶಿಬಿರವೊಂದನ್ನು ಆಯೋಜಿಸಿದೆ. ಸ್ಕ್ರ್ಯಾಪ್ ಲೋಹದಿಂದ ಶಿಲ್ಪಗಳನ್ನು ಮಾಡಲು ನಾನು ಯುವ ಕಲಾವಿದರಿಗೆ ಮಾರ್ಗದರ್ಶನ ನೀಡಲಿದ್ದೇನೆ.
ಬಹಳ ಅದ್ಭುತ. ನಾನೂ ಬರುತ್ತೇನೆ!
ಸ್ವಲ್ಪ ಸಮಯದಲ್ಲೇ -
ಶಿಬಿರದಲ್ಲಿ ನಿಮ್ಮ ಅದ್ಭುತ ಶಿಲ್ಪಗಳನ್ನು ನಾನು ನೋಡಿದೆನು. ನಗರದಾದ್ಯಂತ ಇಂತಹ ಶಿಲ್ಪಗಳನ್ನು ಸ್ಥಾಪಿಸುವ ಮೂಲಕ ವಿಜಯವಾಡವನ್ನು ಸುಂದರಗೊಳಿಸಬೇಕೆಂದು ನಾನು ಬಯಸುತ್ತೇನೆ.
ಖಂಡಿತ, ಸರ್. ಇದಕ್ಕಿಂತ ಗೌರವ ಮತ್ತೊಂದಿಲ್ಲ.
ಶ್ರೀನಿವಾಸ್ ಅವರನ್ನು ಸಂಪರ್ಕಿಸಿದ ವ್ಯಕ್ತಿ ವಿಜಯವಾಡದ ಅಂದಿನ ಮುನ್ಸಿಪಲ್ ಕಮಿಷನರ್ ಆಗಿದ್ದ ಜಿ. ವೀರಪಾಂಡಿಯನ್.








*ಆಂಧ್ರಪ್ರದೇಶದ ಮತ್ತೊಂದು ನಗರ

# ಭಾಗ್ಯಶ್ರೀ ಸಾಹು





*ನೈಸರ್ಗಿಕ ಬಣ್ಣಗಳನ್ನು ಬಳಸಿ ಬಟ್ಟೆಯ ಮೇಲೆ ಸುರುಳಿ ಚಿತ್ರಕಲೆ (ಸ್ಕ್ರಾಲ್ ಪೇಂಟಿಂಗ್) ಮಾಡಲಾಗುತ್ತದೆ


^ಒಡಿಶಾದ ಪುರಿ ಜಿಲ್ಲೆಯಲ್ಲಿ ಮಾಸ್ಟರ್ ಆಫ್ ಟೆಕ್ನಾಲಜಿ


**ಪಟ್ಟಚಿತ್ರ ಕಲಾವಿದರ ಹಳ್ಳಿ


ಕೆಲವು ತಿಂಗಳ ನಂತರ -
ನೀನು ಇವುಗಳನ್ನು ಮಾರಾಟ ಮಾಡುವ ಬಗ್ಗೆ ಗಂಭೀರವಾಗಿ ಯೋಚಿಸಬೇಕು! ಇವುಗಳು ತುಂಬಾ ಸುಂದರವಾಗಿವೆ.
ನೀವು ನನ್ನದೊಂದನ್ನು ಕ್ಯಾನ್ವಾಸ್ ಮೇಲೆ ಮಾಡಬಹುದೇ? ನಾನು ಅದನ್ನು ಮನೆಗೆ ತೆಗೆದುಕೊಂಡು ಹೋಗುತ್ತೇನೆ.
ಖಂಡಿತ, ನಾನು ನಿಮಗಾಗಿ ಒಂದನ್ನು ಮಾಡುತ್ತೇನೆ, ಆದರೆ ಕ್ಯಾನ್ವಾಸ್?
ಭಾಗ್ಯಶ್ರೀ ತನ್ನ ಸ್ನೇಹಿತರನ್ನು ಧೆಂಕನಾಲ್‌ನ ಬ್ರಾಹ್ಮಣಿ ನದಿಗೆ ಕರೆದೊಯ್ದಳು.
ನಾನು ಈ ಕಲ್ಲುಗಳ ಮೇಲೆ ಚಿತ್ರಿಸಬಲ್ಲೆ. ಅವು ದುಂಡಾಗಿ, ನಯವಾಗಿ ಮತ್ತು ಸರಿಯಾದ ಗಾತ್ರದಲ್ಲಿವೆ.
ಉತ್ತಮ ಉಪಾಯ! ಇವು ಕ್ಯಾನ್ವಾಸ್‌ಗಿಂತಲೂ ಉತ್ತಮ ಎನಿಸುತ್ತೆ.
ಭಾಗ್ಯಶ್ರೀ ಅವರ ಬಣ್ಣದ ಕಲ್ಲುಗಳು ಬಹಳ ಬೇಗನೆ ಜನಪ್ರಿಯವಾದವು.
ವಾವ್, ಇವು ಅದ್ಭುತವಾಗಿವೆ! ನೀವು ಇದನ್ನು ಬಿಡಿಸಿದ್ದೀರೆಂದು ನನಗೆ ನಂಬಲಾಗುತ್ತಿಲ್ಲ.
ಧನ್ಯವಾದ! ನಾನು ಈ ಕಲ್ಲುಗಳಿಗೆ ಹೊಸ ಜೀವನ ನೀಡುವುದನ್ನು ಆನಂದಿಸುತ್ತಿದ್ದೇನೆ.
ಕೋವಿಡ್ ಸಾಂಕ್ರಾಮಿಕ ರೋಗದ ಸಮಯದಲ್ಲಿ, ಭಾಗ್ಯಶ್ರೀ ಖಾಲಿ ಬಾಟಲಿಗಳು, ಟಿನ್‌ಗಳು ಮತ್ತು ಬಲ್ಬುಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರು. ಕೆಲವು ದಿನಗಳ ನಂತರ -
ಅಮ್ಮಾ, ನೀವು ಈ ಬಾಟಲಿಗಳು ಮತ್ತು ಬಲ್ಬುಗಳನ್ನು ಗುರುತಿಸುತ್ತೀರಾ?
ತುಂಬಾ ಒಳ್ಳೆಯ ಕೆಲಸ! ನೀವು ಕೇವಲ ಕಲಾವಿದರಲ್ಲ, ನೀವು ಪರಿಸರಕ್ಕೆ ಸಹಾಯ ಮಾಡುತ್ತಿದ್ದೀರಿ.
ಭಾಗ್ಯಶ್ರೀ ಅವರಂತೆಯೇ, ಬಹುಶಃ ನಾವೆಲ್ಲರೂ ಕಲೆಯ ಮೂಲಕ ನಮ್ಮ ಜೀವನ ಮತ್ತು ನಮ್ಮ ಸುತ್ತಲಿನ ಪ್ರಪಂಚಕ್ಕೆ ಬಣ್ಣ ಬಳಿಯಬಹುದು.


# ರಾಮ್ ಲೋತನ್ ಕುಶ್ವಾಹ










*ತಂದೆ


ಇದನ್ನು ಸೂಜಿ-ದಾರ ಎಂದು ಕರೆಯಲಾಗುತ್ತದೆ.
ಮತ್ತು ಇದು ಗಾಯವನ್ನು ಹೊಲಿಯುತ್ತದೆ ಮತ್ತು ಗುಣಪಡಿಸುತ್ತದೆ!
ಸೂಜಿ-ದಾರ ಎಂದು ರಾಮ್ ಲೋತನ್ ಅವರ ಮಗ ಹೇಳಿದ್ದು ಸರಿ - ಇದನ್ನು ಪ್ರಾಚೀನ ಕಾಲದಿಂದಲೂ ಕತ್ತಿಯಿಂದ ಆದ ಆಳವಾದ ಗಾಯಗಳನ್ನು ಸೇರಿಸಲು ಮತ್ತು ಗುಣಪಡಿಸಲು ಬಳಸಲಾಗುತ್ತದೆ.
ಗಿಡಮೂಲಿಕೆಗಳ ಬಗ್ಗೆ ನಿಮಗೆ ಹೇಗೆ ಗೊತ್ತು?
ನಿಮ್ಮ ಅಜ್ಜ ಮತ್ತು ನಿಮ್ಮ ಅಜ್ಜಿಯಿಂದ ನಾನು ಎಲ್ಲವನ್ನೂ ಕಲಿತಿದ್ದೇನೆ
ನಿನಗೆ ತಿಳಿದಿರುವ ಎಲ್ಲವನ್ನೂ ನೀನು ನನಗೆ ಕಲಿಸಬೇಕು.
ನಾನು ನಿನಗೆ ಮತ್ತು ನಿನ್ನ ತಮ್ಮನಿಗೆ ಕಲಿಸುತ್ತೇನೆ.
2016 ರಲ್ಲಿ, ರಾಮ್ ಲೋತನ್ ಅವರು ರಾಜ್ಯ ಜೀವವೈವಿಧ್ಯ ಮಂಡಳಿಯೊಂದಿಗೆ 40 ಜಿಲ್ಲೆಗಳಲ್ಲಿ ಪ್ರವಾಸ ಮಾಡಲು 5 ಸದಸ್ಯರ ತಂಡದ ಭಾಗವಾಗಿದ್ದರು.
ಸಂರಕ್ಷಿಸಬೇಕಾದ ಅನೇಕ ಸ್ಥಳೀಯ ಬೀಜಗಳಿವೆ.
ರಾಮ್ ಲೋತನ್ ಮನೆಗೆ ಹಿಂದಿರುಗಿದಾಗ -
ಜಗ್ಗಿ, ಬೀಜಗಳು ಮತ್ತು ಹಣ್ಣುಗಳನ್ನು ಯಾವ ರೀತಿಯಲ್ಲಿ ಸಂರಕ್ಷಿಸಬಹುದು ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.
ಸರಿ, ಇದರಿಂದ ನಮ್ಮ ಮನೆಗೆ ಸ್ವಲ್ಪ ಹೆಚ್ಚುವರಿ ಆದಾಯವನ್ನು ತರುತ್ತದೆ ಎಂದು ನಾನು ಭಾವಿಸುತ್ತೇನೆ!
ದೊಡ್ಡ ಕುಟುಂಬವನ್ನು ನೋಡಿಕೊಳ್ಳಬೇಕಾಗಿದ್ದರಿಂದ ಜಗ್ಗಿಗೆ ಮನೆ ನಡೆಸುವುದು ಸುಲಭವಾಗಿರಲಿಲ್ಲ.



ರಾಮ್ ಲೋತನ್ ಗಿಡಮೂಲಿಕೆಗಳು ಮತ್ತು ತರಕಾರಿಗಳನ್ನು ಸಂರಕ್ಷಿಸುವ ತನ್ನ ಅನ್ವೇಷಣೆಯಲ್ಲಿ, ಬೀಜಗಳನ್ನು ಸಂಗ್ರಹಿಸಲು ಇವರು ದೂರದವರೆಗೆ ಪ್ರಯಾಣಿಸುತ್ತಿದ್ದರು. ಹಿಮಾಲಯದಿಂದ...
ಅಣ್ಣ, ನನಗೆ ಬ್ರಾಹ್ಮಿ ಬೇರು ಎಲ್ಲಿ ಸಿಗಬಹುದು?
... ಸಾತ್ಪುರ ಮತ್ತು ವಿಂಧ್ಯ ಶ್ರೇಣಿಗಳವರೆಗೆ.
ರಾಮ್ ಲೋತನ್ ತಮ್ಮ ಒಂದೂವರೆ ಎಕರೆ ಜಮೀನಿನಲ್ಲಿ 250 ಬಗೆಯ ಔಷಧೀಯ ಸಸ್ಯಗಳು ಮತ್ತು ದೇಶೀಯ ತರಕಾರಿಗಳನ್ನು ಬೆಳೆದಿದ್ದಾರೆ.
ಇಲ್ಲಿ ಹಿಮಾಲಯದ ಸಸ್ಯಗಳು ಬೆಳೆಯುತ್ತವೆ ಎಂದು ಜನರು ಹೇಳಿದ್ದರು. ಆದರೆ ನೋಡಿ, ಇವರು ಎಷ್ಟು ಚೆಂದವಾಗಿ ಬೆಳೆಯುತ್ತಿದ್ದಾರೆ.
ನಿಮ್ಮ ಕೈಯಲ್ಲಿ ಮ್ಯಾಜಿಕ್ ಇದೆ, ರಾಮ್ ಲೋತನ್ ಜೀ!
ಇವರ ಮನೆಯಲ್ಲಿ, ರಾಮ್ ಲೋತನ್ ಅವರು 'ದೇಸಿ' ವಸ್ತುಸಂಗ್ರಹಾಲಯವನ್ನು ಹೊಂದಿದ್ದು, ಇದು ಹಲವಾರು ವಿಧದ ಸೋರೆಕಾಯಿಗಳು ಮತ್ತು ಅಪರೂಪದ ಬೀಜಗಳನ್ನು ಪ್ರದರ್ಶಿಸುತ್ತದೆ.
ರಾಮ್ ಲೋತನ್ ಜೀ ಅವರ ಪ್ರಯತ್ನವು ನಮಗೆ ಹೆಮ್ಮೆ ಮತ್ತು ನಮ್ಮ ಸ್ಥಳೀಯ ಸಸ್ಯಗಳ ಬಗ್ಗೆ ಅರಿವು ಮೂಡಿಸುತ್ತದೆ.
ರಾಮ್ ಲೋತನ್ ಅವರ ಪ್ರಯಾಣದಲ್ಲಿ ಎಚ್ಚರಿಕೆಯ ಧ್ವನಿ, ಜಗ್ಗಿ, ಮತ್ತು ಅವರು ಬೇಸರದಿಂದ ಒಪ್ಪುತ್ತಾರೆ.
ಅವರಿಗೆ ವಯಸ್ಸಾಗುತ್ತಿದೆ, ಹೀಗಾಗಿ ಅವರ ಕೆಲಸ ಮುಂದುವರೆಸಲು ಸಹಾಯದ ಅಗತ್ಯವಿದೆ.
ಜಮೀನಿಗೆ ಬೇಲಿ ಹಾಕಿಸಿ ವರ್ಷಪೂರ್ತಿ ನೀರು ಪೂರೈಕೆಗಾಗಿ ಬಾವಿ ತೋಡಲು ನನಗೆ ಸಹಾಯ ಸಿಕ್ಕಿದರೆ, ನಮ್ಮ ಬೆಲೆಬಾಳುವ ಬೀಜಗಳನ್ನು ಸಂರಕ್ಷಿಸಲು ನಾನು ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬಹುದು.

# ತಾರಿಖ್ ಅಹ್ಮದ್ ಪಟ್ಲೂ



ಈ ದಿನ ಶ್ರೇಯಸ್, ಚರಣ್ ಮತ್ತು ಪಾರುಲ್ ಗೈರುಹಾಜರಾಗಲು ಕಾರಣವೇನು?
ಪುನಃ ಕೋವಿಡ್ ಬಂದಿಲ್ಲ ಎಂದು ನಾನು ಭಾವಿಸುತ್ತೇನೆ.
ಹಾಗೇನೂ ಇಲ್ಲ ಎಂದು ನಾನೂ ಆಶಿಸುತ್ತೇನೆ. ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆಯಿಂದ ಅನೇಕ ಜನರು ತೊಂದರೆ ಅನುಭವಿಸಿದರು. ಹಳ್ಳಿಗಳ ಪರಿಸ್ಥಿತಿ ಇನ್ನೂ ಹದಗೆಟ್ಟಿತ್ತು.
ನಿಜ, ಆದರೆ ಪ್ರಯತ್ನ ಮೀರಿ ಜನರಿಗೆ ಸಹಾಯ ಮಾಡಿದವರನ್ನು ನಾವು ಮರೆಯಬಾರದು. ಅಂತಹವರಲ್ಲಿ ಒಬ್ಬರು, ಕಾಶ್ಮೀರದ ತಾರಿಖ್ ಅಹ್ಮದ್ ಪಟ್ಲೂ.
ಹಂಜಿಗಳು ಅಥವಾ 'ನೀರಿನ ನಿವಾಸಿಗಳು' ಎಂದು ಕರೆಯಲಾಗುವ ಜನರ ಗುಂಪು ಕಾಶ್ಮೀರದ ಶ್ರೀನಗರದ ಸುಂದರ ಸರೋವರಗಳ ಮೇಲೆ ವಾಸಿಸುತ್ತಾರೆ. ಅವರು ದೋಣಿಗಳಲ್ಲಿ ವಾಸಿಸುತ್ತಾರೆ ಮತ್ತು ಕೆಲಸ ಮಾಡುತ್ತಾರೆ. ನೀರಿನ ಭೂಭಾಗಕ್ಕೆ ಬರಲು, ಅವರು ಶಿಕಾರಸ್ ಎಂದು ಕರೆಯಲಾಗುವ ಸಣ್ಣ ದೋಣಿಗಳಲ್ಲಿ ಹಿಚ್‌ಹೈಕಿಂಗ್ ಅಥವಾ 'ತಾರ್' ವ್ಯವಸ್ಥೆಯನ್ನು ಬಳಸುತ್ತಾರೆ.
2020 ರಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗವು ಜಗತ್ತನ್ನು ಆವರಿಸಿಕೊಂಡಾಗ -
ಓಹ್ಹ! ನನಗೆ ಉಸಿರಾಡಲು ಆಗುತ್ತಿಲ್ಲ. ದಯವಿಟ್ಟು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ.
ನಾನು ನಿನ್ನನ್ನು ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ನಾನು ಸೋಂಕಿಗೆ ಒಳಗಾಗಲು ಬಯಸುವುದಿಲ್ಲ.
ತಾರಿಖ್ ಅಹ್ಮದ್ ಪಟ್ಲೂ ದಾಲ್ ಸರೋವರದಲ್ಲಿ ಹೌಸ್ ಬೋಟ್ ಮಾಲೀಕರಾಗಿದ್ದರು. ಅವರಿಗೆ ಕೋವಿಡ್ ಇತ್ತು ಆದರೆ ಅವರನ್ನು ಆಸ್ಪತ್ರೆಗೆ ಸಾಗಿಸಲು ಯಾರೂ ಸಿದ್ಧರಿರಲಿಲ್ಲ.
ಅಂತಿಮವಾಗಿ, ಸ್ನೇಹಿತನೊಬ್ಬ ಅವರನ್ನು ಕರೆದುಕೊಂಡು ಹೋದನು. ಆಸ್ಪತ್ರೆಯಲ್ಲಿ -
ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ತಲುಪಲು ಸಾಧ್ಯವಾಗದೆ ನಮ್ಮವರು ಅನೇಕ ಜನ ಸಾಯುತ್ತಿದ್ದಾರೆ
ಅದೃಷ್ಟವಶಾತ್, ತಾರಿಖ್ ಚೇತರಿಸಿಕೊಂಡರು, ಆದರೆ ಈ ಅವ್ಯವಸ್ಥೆಗಳನ್ನು ಸರಿಪಡಿಸುವ ಅಗತ್ಯತೆ ಬಹಳ ಇತ್ತು.


ಅವರು ದೆಹಲಿ ಮೂಲದ ಎನ್‌ಜಿಒ, ಸತ್ಯ ರೇಖಾ ಟ್ರಸ್ಟಿನೊಂದಿಗೆ ಮಾತನಾಡಿದರು. ಟ್ರಸ್ಟಿನ ಬೆಂಬಲದೊಂದಿಗೆ, ತಾರಿಖ್ ದೋಣಿಯೊಂದನ್ನು ನಿರ್ಮಿಸಿ, ಅದಕ್ಕೆ ತುರ್ತು ಸೌಲಭ್ಯ ಅಳವಡಿಸಿದರು.
ನನಗೆ ಆದ ಹಾಗೆ ಯಾರಿಗೂ ತೊಂದರೆಯಾಗಬಾರದೆಂಬ ಉದ್ದೇಶದಿಂದ ನಾನು ದಾಲ್ ಸರೋವರದಲ್ಲಿ ಆಂಬ್ಯುಲೆನ್ಸ್ ಸೇವೆಯನ್ನು ಪ್ರಾರಂಭಿಸಲು ಬಯಸುತ್ತೇನೆ.
ಒಂದು ಉತ್ತಮ ಉಪಾಯ. ನಾವು ನಿಮಗೆ ಸಹಾಯ ಮಾಡುತ್ತೇವೆ.
ಟ್ರಸ್ಟಿನ ಬೆಂಬಲದೊಂದಿಗೆ, ತಾರಿಕ್ ದೋಣಿಯನ್ನು ನಿರ್ಮಿಸಿ ತುರ್ತು ಸೌಲಭ್ಯಗಳನ್ನು ಅಳವಡಿಸಿ, ಸೈರನ್ ಅನ್ನು ಜೋಡಿಸಿದರು.
ನನ್ನ ನೀರಿನ ಆಂಬ್ಯುಲೆನ್ಸ್! ಇದು ಹಾಸಿಗೆ, ಆಮ್ಲಜನಕದ ಕಾನ್ಸಂಟ್ರೇಟರ್‌ಗಳು, ಸಿಲಿಂಡರುಗಳು, ಮಾಸ್ಕುಗಳು, ಸ್ಯಾನಿಟೈಸರ್, ಪಿಪಿಇ ಕಿಟ್‌ಗಳು, ಸ್ಟ್ರೆಚರ್, ಗಾಲಿಕುರ್ಚಿ, ಧ್ವನಿವರ್ಧಕ ಮತ್ತು ತುರ್ತು ಕಿಟ್‌ಗಳನ್ನು ಹೊಂದಿದೆ.
ಮುಳುಗುತ್ತಿರುವ ಹೌಸ್‌ಬೋಟ್‌ಗಳಿಗೆ ಸಹಾಯ ಮಾಡಲು ಅಗ್ನಿಶಾಮಕ ಸಾಧನ ಮತ್ತು ಸಲಕರಣೆಗಳನ್ನು ಅವರು ಸೇರಿಸಿದ್ದರು.
ತಾರಿಖ್ ತನ್ನ ಫೋನ್ ಸಂಖ್ಯೆಯನ್ನು ಸರೋವರದ ಜನರಿಗೆ ನೀಡಿದರು ಮತ್ತು ತಕ್ಷಣದಿಂದಲೇ ಒಂದರ ಹಿಂದೆ ಒಂದರಂತೆ ತುರ್ತು ಸಂದರ್ಭಗಳಿಗೆ ನೆರವಾದರು.
ಚಿಂತಿಸಬೇಡಿ. ನೀವು ಹುಷಾರುಗುತ್ತೀರಿ. ನಾವು ನಿಮ್ಮನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದೇವೆ.
AMBULAN
ಇವರು ಆಸ್ಪತ್ರೆಯ ಆಂಬ್ಯುಲೆನ್ಸುಗಳೊಂದಿಗೆ ಸಂಯೋಜನೆ ಮಾಡುತ್ತಿದರು ಇದರಿಂದ ಅವರು ತೀರದಲ್ಲಿ ಇವರಿಗಾಗಿ ಕಾಯುತ್ತಿದ್ದರು. ಇವರ ಎಲ್ಲಾ ಸೇವೆಗಳು ಉಚಿತವಾಗಿದ್ದವು, ಮತ್ತು ಹಾಗೆಯೇ ಮುಂದುವರೆದವು.
ಸರೋವರದ ಯಾವುದೇ ತುರ್ತು ಪರಿಸ್ಥಿತಿಗಾಗಿ ತಾರಿಖ್ ಅವರನ್ನು ಕರೆಯುತ್ತಿದ್ದರು. ಅವರ ಕೆಲಸದಲ್ಲಿ 10 ವರ್ಷದ ಮಗಳು ಜನ್ನತ್ ಸಹಾಯ ಮಾಡುತ್ತಿದ್ದಳು.
ಗಮನಿಸಿ. ಕೆಂಪು ದೋಣಿ! ದಾಲ್ ಸರೋವರ ನಮ್ಮ ಮನೆ. ದಯವಿಟ್ಟು ನೀವು ಎಸೆದ ಆ ಬಾಟಲಿಯನ್ನು ಎತ್ತಿಕೊಳ್ಳಿ.
ವಾರಕ್ಕೆ ಎರಡು ಬಾರಿ, ತಂದೆ ಮತ್ತು ಮಗಳು ದೋಣಿಯಲ್ಲಿ ಹೋಗಿ ಎಲ್ಲಾ ಕಸವನ್ನು ಸಂಗ್ರಹಿಸುತ್ತಿದ್ದರು.
ಜೂನ್, 2021 ರಲ್ಲಿ, ಪ್ರಧಾನಿ ಮೋದಿಯವರು ತಮ್ಮ ಮನ್ ಕೀ ಬಾತ್‌ನಲ್ಲಿ ಇವರ ಬಗ್ಗೆ ಪ್ರಸ್ತಾಪಿಸಿದರು. ತಾರಿಕ್ ಒಂದು ಕೋರಿಕೆ ಸಲ್ಲಿಸುತ್ತಾರೆ.
ನನಗೆ ಸಹಾಯವಾಣಿ ಸಂಖ್ಯೆ ಮತ್ತು ನನ್ನ ಆಂಬ್ಯುಲೆನ್ಸಿನಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರ ಅಗತ್ಯವಿದೆ.
ಈ ರೀತಿಯ ನಾಗರಿಕ ಉಪಕ್ರಮಗಳನ್ನು ಸರ್ಕಾರ ಮತ್ತು ಜನರು ಸಮಾನವಾಗಿ ಬೆಂಬಲಿಸಬೇಕು.


# ಸಂಜಯ್ ಕಚ್ಛಪ್



ಶಾಲೆಯ ಗ್ರಂಥಾಲಯಕ್ಕೆ ಹೊಸ ಕಥೆಪುಸ್ತಗಳ ಸಂಗ್ರಹನ ಬರುತ್ತಿದೆ ಎಂದು ಕೇಳಿದ್ದೆ.
ಅದ್ಭುತ! ಹಳ್ಳಿಯಲ್ಲಿ ವಾಸಿಸುವ ನನ್ನ ಸೋದರಸಂಬಂಧಿ ಪಿಂಕಿಯ ಶಾಲೆಯಲ್ಲಿ ಗ್ರಂಥಾಲಯವೇ ಇಲ್ಲ.
ಬಹುಶಃ ಹಳ್ಳಿಗಳಲ್ಲಿ ಗ್ರಂಥಾಲಯಗಳೇ ಇಲ್ಲ.
ಇಂದಿನ ಮನ್ ಕೀ ಬಾತ್ ಕಥೆಯು ಜಾರ್ಖಂಡ್‌ನ ಲೈಬ್ರರಿ ಮ್ಯಾನ್ ಸಂಜಯ್ ಕಚ್ಛಪ್ ಎಂಬ ವ್ಯಕ್ತಿಯ ಕುರಿತಾಗಿದೆ.
ಸಂಜಯ್ ಕಚ್ಛಪ್, ರಾಜ್ಯ ಸರ್ಕಾರಿ ಉದ್ಯೋಗಿಯಾಗಿದ್ದು, ಜಾರ್ಖಂಡ್‌ನ ದೂರದ ಹಳ್ಳಿಯಲ್ಲಿ. ಒಂದು ಸಂಜೆ -
ಇನ್ನೂ 15 ನಿಮಿಷ. ನಾನು ಇನ್ನೂ ಈ ಪುಸ್ತಕವನ್ನು ಓದಿ ಮುಗಿಸಿಲ್ಲ.
ಇಲ್ಲ. ನಾನು ಅಷ್ಟು ಹೊತ್ತು ಕಾಯಲು ಸಾಧ್ಯವಿಲ್ಲ. ನೀವು ಈಗಾಗಲೇ ಒಂದು ಗಂಟೆಯಿಂದ ಓದುತ್ತಾ ಇದ್ದೀರಿ!
ಇಲ್ಲಿ ಏನು ನಡೀತಿದೆ?
ನಮ್ಮ ಬಳಿ ಇತಿಹಾಸ ಪುಸ್ತಕದ ಒಂದು ಪ್ರತಿ ಮಾತ್ರ ಇದೆ. ನಾವಿಬ್ಬರೂ ಗುಪ್ತ ಸಾಮ್ರಾಜ್ಯದ ಬಗ್ಗೆ ಅಧ್ಯಯನ ಮಾಡುತ್ತಿದ್ದೇವೆ. ನನಗೂ ಪುಸ್ತಕ ಬೇಕು.
ಈ ವಿದ್ಯಾರ್ಥಿಗಳಿಗೆ ಓದಲು ಸಾಕಷ್ಟು ಪುಸ್ತಕಗಳನ್ನು ಇರಬೇಕಿತ್ತೆಂದು ನಾನು ಬಯಸುತ್ತೇನೆ. ನಾನು ಏನು ಮಾಡುತ್ತೇನೆ ಎಂಬುದು ನನಗೆ ಗೊತ್ತು.
ಮರುದಿನ ಬೆಳಿಗ್ಗೆ, ಸಂಜಯ್ ಸ್ಥಳೀಯ ಚಹಾ ಅಂಗಡಿಗೆ ಭೇಟಿ ನೀಡಿದರು.
ಏನು ನಡೀತಿದೆ? ನಾನು ಗ್ರಾಮದ ಹಿರಿಯರನ್ನು ಎಲ್ಲಿ ಭೇಟಿಯಾಗ ಬಹುದು?
ನಾವು ಒಂದು ಸಮುದಾಯ ಕೇಂದ್ರವನ್ನು ಹೊಂದಿದ್ದು, ಅಲ್ಲಿ ಅವರು ನಮ್ಮ ಜನರು ಪ್ರತಿದಿನ ಬೆಳಿಗ್ಗೆ ಗ್ರಾಮದ ವಿಷಯಗಳನ್ನು ಚರ್ಚಿಸಲು ಭೇಟಿಯಾಗುತ್ತಾರೆ.





* ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಒಂದು ಹಳ್ಳಿ




*ಅಂತರ್ಜಾಲದ ಸಹಾಯದಿಂದ ಹೆಚ್ಚಿನ ಸಂಖ್ಯೆಯ ಜನರಿಂದ ಹಣ ಸಂಗ್ರಹಿಸುವುದು.


# ಹರಿಶ್ಚಂದ್ರ ಸಿಂಗ್




*ಭಾರತೀಯ ನೆಲ್ಲಿಕಾಯಿ


^ಸಕ್ಕರೆ ಪಾಕದಲ್ಲಿ ನೆನೆಸಿದ ನೆಲ್ಲಿಕಾಯಿ

**ಉತ್ತರ ಪ್ರದೇಶದ ಒಂದು ಜಿಲ್ಲೆ





*ಒಂದು ಕ್ವಿಂಟಾಲ್ ಎಂದರೆ 100 ಕೆ.ಜಿ.

# ಸಚ್ಚಿದಾನಂದ ಭಾರತಿ




*ಮರಗಳನ್ನು ರಕ್ಷಿಸುವ ಪ್ರಯತ್ನದಲ್ಲಿ ಗ್ರಾಮಸ್ಥರು ಮರಗಳನ್ನು ತಬ್ಬಿಕೊಂಡ ಚಳುವಳಿ.

^ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿರುವ ಒಂದು ಪಟ್ಟಣ.





*ಉತ್ತರಾಖಂಡದ ಪೌರಿ ಗರ್ವಾಲ್ ಜಿಲ್ಲೆಯಲ್ಲಿರುವ ಒಂದು ಹಳ್ಳಿ.

^ಉತ್ತರಾಖಂಡದಾದ್ಯಂತ 25 ಕಿಮೀ ದೂರದ ಪರ್ವತ ಶ್ರೇಣಿ.

**ನೀರಿನ ಹೊಂಡ


^^ನೀರು ಹರಿಯದಂತೆ ಮಾಡುವಿಕೆ



ವರ್ಷಗಳು ಕಳೆದಂತೆ, ಅವರ ಪ್ರಯತ್ನಗಳಿಂದ ದೊಡ್ಡ ಯಶಸ್ಸು ದೊರೆಯಿತು.
ಸೂಖ ರೌಲ* ಈಗ ವರ್ಷಪೂರ್ತಿ ಹರಿಯುತ್ತಿದೆ!
ಹೌದು, ಈ ಹಿಂದೆ ಮಳೆಗಾಲದಲ್ಲಿ ತುಂಬಿಹರಿದು, ನವೆಂಬರ್ ವೇಳೆಗೆ ಬತ್ತುತ್ತಿತ್ತು.
ನೀರಿನ ಹೊಂಡಗಳಿಂದಾಗಿ ಹೀಗಾಗುತ್ತಿದೆ.
ಹಳ್ಳಿಗರು ತಮ್ಮ ಗ್ರಾಮ ಗಡ್ ಖರಕ್ ಹೆಸರಿನ ದ್ಯೋತಕವಾಗಿ ಸೂಖ ರೌಲ ಎಂಬುದನ್ನು ಗಡ್ ಗಂಗಾ ಎಂದು ಮರುನಾಮಕರಣ ಮಾಡಿದರು.
ಸಚ್ಚಿದಾನಂದ, ಜಲ್ ತಲೈಯಗಳ ಜೊತೆಗೆ, ಹೆಚ್ಚಿನ ಮಳೆನೀರನ್ನು ಹಿಡಿದಿಟ್ಟುಕೊಳ್ಳಲು ಮತ್ತು ಕಾಡುಗಳನ್ನು ಸಂರಕ್ಷಿಸಲು ಪರ್ವತಗಳಲ್ಲಿ ನೂರಾರು ಕೊಳಗಳು ಮತ್ತು ಕಾಲುವೆಗಳನ್ನು ನಿರ್ಮಿಸಿದರು.
ನಾವೀಗ ವರ್ಷವಿಡೀ ತೊರೆಗಳ ನೀರನ್ನು ಕುಡಿಯಬಹುದು.
ಅವರ ಪ್ರಯತ್ನಗಳಿಗಾಗಿ, ಸಚ್ಚಿದಾನಂದರವರಿಗೆ ಉತ್ತರಾಖಂಡ ಹಸಿರು ಪ್ರಶಸ್ತಿ 2011, ಮಹಾತ್ಮ ಗಾಂಧಿ ರಾಷ್ಟ್ರೀಯ ಪ್ರಶಸ್ತಿ 2013, ಇಂದಿರಾ ಗಾಂಧಿ ಪರಿಸರ ಪ್ರಶಸ್ತಿ 2015 ಸೇರಿದಂತೆ ಹಲವು ಪ್ರಶಸ್ತಿಗಳನ್ನು ನೀಡಲಾಗಿದೆ.
ಜೂನ್ 2021 ರಲ್ಲಿ, ಪ್ರಧಾನಿ ಮೋದಿ ರವರು ತಮ್ಮ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಸಚ್ಚಿದಾನಂದ ಭಾರತಿಯವರನ್ನು ಗುರುತಿಸಿ, ಅವರ ಪ್ರಯತ್ನಗಳನ್ನು ಪ್ರಶಂಸಿಸಿದರು.
ಪೌರಿ ಗರ್ವಾಲ್ ಬೆಟ್ಟಗಳಲ್ಲಿ ಇಂದು 150 ಹಳ್ಳಿಗಳಲ್ಲಿ 30,000 ನೀರಿನ ಹೊಂಡಗಳಿವೆ.
ಪರಿಸರಕ್ಕೆ ಸೇವೆ ಸಲ್ಲಿಸುವ ಮೂಲಕ, ನನ್ನ ಜೀವನವು ಸಾರ್ಥಕವಾಯಿತೆಂದು ನಾನು ಭಾವಿಸುತ್ತೇನೆ.
ಸಚ್ಚಿದಾನಂದ ಹಾಗೂ ಗ್ರಾಮಸ್ಥರು ಸೇರಿ 50 ಲಕ್ಷ ಸಸಿಗಳನ್ನು ನೆಟ್ಟಿದ್ದಾರೆ. ಮತ್ತು ಈ ನೀರಿನ ಹೊಂಡಗಳು ಕಾಳ್ಗಿಚ್ಚನ್ನು ತಡೆದಿವೆ


*ಒಣ ಕಂದರ


# ಸಿಕಾರಿ ಟಿಸ್ಸೊ




*ಒಡಿಯಾದಲ್ಲಿ, ನನ್ನನ್ನು ಕ್ಷಮಿಸಿ ಎಂದರ್ಥ

^ಅಸ್ಸಾಂನ ಅತಿ ದೊಡ್ಡ ಜಿಲ್ಲೆಗಳಲ್ಲಿ ಒಂದು


**ಕರ್ಬಿ ಭಾಷೆಯಲ್ಲಿ ಶುಭಾಶಯ



ಒಂದು ಸಂಜೆ -
ನನ್ನ ಅಜ್ಜಿ ಹಾಡುತ್ತಿದ್ದ ಕೆಲವು ಲಾಲಿ ಹಾಡುಗಳು ನನಗೆ ಗೊತ್ತು. ನೀನು ಅವುಗಳನ್ನು ಸಹ ಬರೆದುಕೊಳ್ಳಲು ಬಯಸುವೆಯಾ?
ಅದ್ಭುತ! ಎಲ್ಲಾ ಸಂಸ್ಕೃತಿಗಳಲ್ಲಿ ಲಾಲಿ ಹಾಡುಗಳಿಗೆ ಪ್ರಮುಖ ಸ್ಥಾನವಿದೆ. ನೀವು ಹಾಡಿದರೆ, ನಾನು ಅವುಗಳನ್ನು ರೆಕಾರ್ಡ್ ಮಾಡಿಕೊಳ್ಳಬಹುದು.
ಮಹಿಳೆ ಒಪ್ಪಿದರು ಮತ್ತು ಸಿಕಾರಿ ಲಾಲಿ ಹಾಡುಗಳನ್ನು ರೆಕಾರ್ಡ್ ಮಾಡಿಕೊಳ್ಳಲು ಪ್ರಾರಂಭಿಸಿದರು.
ಸ್ವಲ್ಪ ಸಮಯದಲ್ಲೇ -
ನೀವು ಕರ್ಬಿ ಸಂಸ್ಕೃತಿಯ ಕುರಿತು ವೀಡಿಯೊಗಳನ್ನು ಮಾಡುತ್ತಿದ್ದೀರಿ ಎಂದು ನಾನು ಕೇಳಿದೆ. ಇಲ್ಲಿನ ನನ್ನ ಸ್ನೇಹಿತ ಕರ್ಬಿ ಜಾನಪದ ಹಾಡುಗಳು ಮತ್ತು ಕಥೆಗಳಲ್ಲಿ ಪರಿಣತ. ಅವನು ಸಹಾಯ ಮಾಡಬಹುದೇ?
ಖಂಡಿತವಾಗಿ! ಹಾಡುಗಳು ಮತ್ತು ಕಥೆಗಳು ಮಕ್ಕಳಲ್ಲಿ ಭಾಷೆಯ ಬಗ್ಗೆ ಆಸಕ್ತಿಯನ್ನು ಉಂಟುಮಾಡುತ್ತವೆ.
ಅವರು ಸಮುದಾಯದೊಂದಿಗೆ ಹಂಚಿಕೊಂಡ ಕರ್ಬಿ ಹಾಡುಗಳು ಮತ್ತು ಕಥೆಗಳ ಆಕರ್ಷಕ ಸಂಗ್ರಹವನ್ನು ಸಿಕಾರಿ ಸಂಗ್ರಹಿಸಿದರು.
ಹೆಚ್ಚಿನ ಮಾಹಿತಿಗಾಗಿ, ಸಿಕಾರಿ ಅಸ್ಸಾಂ ಮತ್ತು ಮೇಘಾಲಯದ ಮೂಲಕ ಪ್ರಯಾಣಿಸಿದರು. ಹಿಂದಿರುಗಿದ ಮೇಲೆ -
ಜನರು ಕರ್ಬಿ ಮಾತನಾಡುವ ವಿಧಾನ ಸ್ಥಳದಿಂದ-ಸ್ಥಳಕ್ಕೆ ಬದಲಾಗುತ್ತದೆ. ಅವರು ನಮ್ಮ ಕರ್ಬಿ ನಿಘಂಟನ್ನು ಅರ್ಥಮಾಡಿಕೊಳ್ಳುತ್ತಾರೆಯೇ?
ನಾವು ಇದನ್ನು ಕರ್ಬಿ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಅರ್ಥಗಳನ್ನು ನೀಡಿ ದ್ವಿಭಾಷಾ ನಿಘಂಟಾಗಿ ಏಕೆ ಮಾಡಬಾರದು?
ನಾನು ಅದರಲ್ಲಿ ಕರ್ಬಿ ಪದಗಳ ವಿವಿಧ ಮಾರ್ಪಾಡುಗಳನ್ನು ಸಹ ಸೇರಿಸುತ್ತೇನೆ.
ಸಿಕಾರಿ ಮತ್ತು ಗ್ರಾಮದ ಹಿರಿಯರು ನಿಘಂಟಿನ ಕೆಲಸವನ್ನು ಪ್ರಾರಂಭಿಸಿದರು. ಕೆಲವು ತಿಂಗಳ ನಂತರ -
ನಮಸ್ತೆ, ಅಂಕಲ್ ಸಿಕಾರಿ! ನೀವು ಏನು ಮಾಡುತ್ತಿರುವಿರಿ?
ಶ್ಶ್... ಇದು ಮುಖ್ಯ ಎನಿಸುತ್ತದೆ. ಆಡಲು ಹೋಗೋಣ.
ಇಲ್ಲ, ತೊಂದರೆ ಇಲ್ಲ. ನಾನು ಪ್ರತಿ ಪದವನ್ನು ಬರೆದುಕೊಳ್ಳುವ ಮೂಲಕ ನಮ್ಮ ಕರ್ಬಿ ಭಾಷೆಯನ್ನು ಉಳಿಸುತ್ತಿದ್ದೇನೆ. ನಾವು ಇದರ ಬಗ್ಗೆ ಕಾಳಜಿ ವಹಿಸದಿದ್ದರೆ, ಇದು ನಶಿಸಿ ಹೋಗಬಹುದು.





*ಕರ್ಬಿ ಭಾಷೆಯಲ್ಲಿ, ಮಕ್ಕಳು

^ಅಸ್ಸಾಂನಲ್ಲಿ ಬುಡಕಟ್ಟು ಭಾಷೆಗಳನ್ನು ಸಂರಕ್ಷಿಸುವ ಕೆಲಸ ಮಾಡುತ್ತಿರುವ ಜನರ ಗುಂಪು


ಪಿ.ಎಂ. ಮುರುಗೇಶನ್
ಇದು ನಮ್ಮ ಶಾಲೆಯು ನಮಗಾಗಿ ಏರ್ಪಡಿಸಿದ ಅತ್ಯುತ್ತಮ ವಿಶೇಷ ತರಗತಿಯಾಗಿದೆ.
'ಕಸದಿಂದ ರಸ' ಕಾರ್ಯಾಗಾರ; ತ್ಯಾಜ್ಯ ವಸ್ತುಗಳಿಂದ ಇಷ್ಟೊಂದು ವಸ್ತುಗಳನ್ನು ಸೃಷ್ಟಿಸಲು ಸಾಧ್ಯ ಎಂದು ನನಗೂ ತಿಳಿದಿರಲಿಲ್ಲ.
ನಾಯರ್ ಸರ್ ತರಗತಿಗೆ ಬಂದಾಗ -
ಸರ್, ಈ ತೆಂಗಿನ ಚಿಪ್ಪಿನ ಲೋಟಕ್ಕೆ ನಾನು ಪೈಂಟ್ ಮಾಡಿದ್ದೇನೆ ನೋಡಿ.
ಮತ್ತು ಈ ಪೆನ್ ಹೋಲ್ಡರ್ ಅನ್ನು ನಾನು ಹಳೆಯ ಬಳೆಗಳಿಂದ ಮಾಡಿದ್ದೇನೆ.
ಸುಂದರವಾಗಿವೆ! ಬಿಸಾಡಿದ ಬಾಳೆ ನಾರಿನಿಂದ, ಕೈಯಿಂದ ತಯಾರಿಸಿದ ಉತ್ಪನ್ನಗಳ ಶ್ರೇಣಿಯನ್ನು ತಯಾರಿಸಿದ ಮುರುಗೇಶನ್ ಅವರ ಕಥೆಯನ್ನು ನಾನು ನಿಮಗೆ ಹೇಳುತ್ತೇನೆ.
ಪಿ.ಎಂ. ಮಧುರೈನ ಮೆಲಕ್ಕಲ್ ಗ್ರಾಮದ ಮುರುಗೇಶನ್ ಎಂಟನೇ ತರಗತಿಯಲ್ಲಿದ್ದಾಗ ತಮ್ಮ ಕುಟುಂಬದ ಜಮೀನಿನಲ್ಲಿ ಕೆಲಸ ಮಾಡುವ ಸಲುವಾಗಿ ಶಾಲೆಯನ್ನು ಬಿಟ್ಟರು.
ಓಹೋ..!
ಈ ಹುಡುಗನಿಗೆ ಶಕ್ತಿಯೇ ಇಲ್ಲ..
ಅವರು ಬಡವರಾಗಿದ್ದು, ಕುಟುಂಬದ ಸದಸ್ಯರೆಲ್ಲರೂ ಜಮೀನಿನಲ್ಲಿ ದುಡಿಯಬೇಕಾಗಿತ್ತು.
ಮುರುಗೇಶ ಬಹಳ ಬುದ್ಧಿವಂತನಾಗಿದ್ದು, ಎಲ್ಲವನ್ನೂ ಚೆನ್ನಾಗಿ ಗಮನಿಸುತ್ತಿದ್ದ. 2009 ರಲ್ಲಿ, ಅವರು 41 ವರ್ಷ ವಯಸ್ಸಿನವರಾಗಿದ್ದಾಗ -
ನಾವು ಬಾಳೆ ಗಿಡದ ಪ್ರತಿಯೊಂದು ಭಾಗವನ್ನು ಉಪಯೋಗಿಸುತ್ತೇವೆ, ಒಳಗಿನ ಕಾಂಡವನ್ನು ಸಹ ತಿನ್ನುತ್ತೇವೆ, ಆದರೆ ನಾವು ಹೊರಗಿನ ಕಾಂಡವನ್ನು ಸುಡುತ್ತೇವೆ. ನಾವೂ ಅದನ್ನು ಏಕೆ ಬಳಸಬಾರದು?
ಅದು ಉಪಯುಕ್ತವಾಗುವುದಾಗಿದ್ದರೆ, ಯಾರಾದರೂ ಅದರ ಬಗ್ಗೆ ಬಹಳ ಹಿಂದೆಯೇ ಯೋಚಿಸಿರುತ್ತಿದ್ದರು.
ಮುರುಗೇಶನಿಗೆ ಮನವರಿಕೆಯಾಗಲಿಲ್ಲ.
ಕಾಂಡವು ತುಂಬಾ ಪದರಗಳನ್ನು ಹೊಂದಿದೆ... ನಾವು ಅವುಗಳನ್ನು ಪ್ರತ್ಯೇಕಿಸಿ ತೆಗೆದುಹಾಕಿದರೆ ... ಹಾ....


ಒಂದು ದಿನ -
ನೀನು ಏನು ಮಾಡುತ್ತಿರುವೆ?
ಇದು ತೆಂಗಿನ ಸಿಪ್ಪೆಯಿಂದ ಹಗ್ಗವನ್ನು ತಯಾರಿಸಲು ಸಹಾಯ ಮಾಡುವ ನೂಲುವ ಯಂತ್ರ. ನಾನು ಬಾಳೆಗಿಡದ ದಿಂಡಿನ ಪಟ್ಟಿಗಳಿಂದ ಹಗ್ಗವನ್ನು ಮಾಡಲು ಪ್ರಯತ್ನಿಸುತ್ತಿದ್ದೇನೆ.
ಅದು ಫಲಿಸಲಿಲ್ಲ. ಆದರೆ ಮುರುಗೇಶನ್ ಈಗ ಹೊಸತನದ ಹಾದಿಯಲ್ಲಿದ್ದರು. ಸಾಕಷ್ಟು ಪ್ರಯೋಗ ಮತ್ತು ದೋಷದ ನಂತರ-
ನಾನು ಮಾಡಿದೆ! ಈ ಹೊಸ ಯಂತ್ರದಿಂದ ನಾವು ಬಾಳೆ ದಿಂಡಿನ ಹಗ್ಗವನ್ನು ತಿರುಗಿಸಬಹುದು.
ತೆಂಗಿನ ಯಂತ್ರವನ್ನು ಮುರುಗೇಶನ್ ಬಾಳೆದಿಂಡಿನ ಕೆಲಸಕ್ಕೆ ಅಳವಡಿಸಿದ್ದರು!
ಬೈಸಿಕಲ್ ಚಕ್ರ ಮತ್ತು ಪುಲ್ಲಿಗಳೊಂದಿಗೆ, ಮುರುಗೇಶನ್ ಬಾಳೆ ನಾರನ್ನು ಹಗ್ಗವಾಗಿ ತಿರುಗಿಸಲು ಸಾಧ್ಯವಾಯಿತು.
ಬಾಳೆದಿಂಡಿನಿಂದ ಹಗ್ಗ! ಅದು ತುಂಡಾಗುತ್ತದೆ. ಇದನ್ನು ಯಾರು ಖರೀದಿಸಲಿದ್ದಾರೆ?
ನಾವು ಅವುಗಳನ್ನು ಗಟ್ಟಿಯಾಗಿಸಲು ಒಟ್ಟಾಗಿ ಹೆಣೆದರೆ ಹೇಗೆ.
ಗಂಡ ಮತ್ತು ಹೆಂಡತಿ ಎಳೆಗಳನ್ನು ಹೆಣೆಯದು, ಗಟ್ಟಿಯಾದ ಹಗ್ಗ ತಯಾರಿಸಲು ಒಟ್ಟಾಗಿ ಕೆಲಸ ಮಾಡಿದರು.
ಆದರೆ ಇದು ಮಾರುಕಟ್ಟೆಯಲ್ಲಿ ಲಭ್ಯವಿದ್ದ ಬೇರೆ ಹಗ್ಗಗಳಷ್ಟು ಗಟ್ಟಿಯಾಗಿರಲಿಲ್ಲ, ಆದ್ದರಿಂದ ಯಾರಿಗೂ ಅವುಗಳು ಬೇಕಿರಲಿಲ್ಲ.
ನಾನು ಇಲ್ಲಿಗೇ ಬಿಡುವುದಿಲ್ಲ. ಇದರಿಂದ ಏನಾದರೂ ಮಾಡಲು ಪ್ರಯತ್ನಿಸೋಣ.
ಬ್ಯಾಗುಗಳು, ಬುಟ್ಟಿಗಳು, ನೆಲಹಾಸುಗಳು... ತಾವು ಸಿದ್ಧಪಡಿಸಿದ ಹಗ್ಗದಿಂದ ಅನೇಕ ವಸ್ತುಗಳನ್ನು ಮಾಡಬಹುದು ಎಂಬುಂದನ್ನು ದಂಪತಿಗಳು ಕಂಡುಕೊಂಡರು.


ಸ್ವಲ್ಪ ತಿಂಗಳುಗಳಲ್ಲಿಯೇ, ಮುರುಗೇಶನ್ ಎಂ.ಎಸ್. ಹಗ್ಗ ಉತ್ಪಾದನಾ ಕೇಂದ್ರ ಎಂಬ ಕಂಪನಿಯನ್ನು ಸ್ಥಾಪಿಸಿದರು. ಅವರ ಚಿಕ್ಕದಾದ ಎರಡು ಜನರಿದ್ದ ಘಟಕವು ಹತ್ತು ಜನರ ಘಟಕವಾಯಿತು. ಆದರೆ, ಹಗ್ಗವನ್ನು ತಯಾರಿಸುವುದು ಬಹಳ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿತ್ತು.
ನಾವೆಲ್ಲರೂ ದಿನವಿಡೀ ಕಷ್ಟಪಟ್ಟು ಕೆಲಸ ಮಾಡಿದರೂ ಏನನ್ನೂ ಉತ್ಪಾದಿಸಲಾಗುತ್ತಿಲ್ಲ. ಯಂತ್ರವನ್ನು ಕೈಯಿಂದ ಚಲಾಯಿಸುವ ಬದಲು, ನಾನು ಅದಕ್ಕೆ ಮೋಟರ್ ಜೋಡಿಸಿದರೆ ಹೇಗೆ?
ಪ್ರಕ್ರಿಯೆಯು ಹೆಚ್ಚು ವೇಗ ಪಡೆಯಿತು ಮತ್ತು ಮುರುಗೇಶನ್ ಅವರ ತಮ್ಮ ಐಡಿಯಾವನ್ನು ಪೇಟೆಂಟ್ ಮಾಡಿದರು. 2016 ರಲ್ಲಿ, ಅವರು ಒಂದು ಹೊಸ ಯಂತ್ರವನ್ನು ತಯಾರಿಸಿದರು, ಅದು ಒಂದರ ಬದಲಿಗೆ ಹಗ್ಗಗಳ ಆರು ಸಿಂಬಿಗಳನ್ನು ತಯಾರಿಸುತ್ತದೆ.
ಈಗ ನಾವು 25,000 ಮೀಟರ್ ಹಗ್ಗವನ್ನು ತಯಾರಿಸುತ್ತಿದ್ದೇವೆ! ಮೊದಲು ನಾವು 2,500 ಮೀಟರ್ ಮಾತ್ರ ಮಾಡಬಹುದಿತ್ತು!
ಎಷ್ಟೋ ಮಹಿಳೆಯರಿಗೆ ಉದ್ಯೋಗ ನೀಡಿದ್ದೇವೆ. ಅದು ನನಗೆ ತುಂಬಾ ಖುಷಿ ತಂದಿದೆ.
ಶೀಘ್ರದಲ್ಲೇ, 350 ಕ್ಕೂ ಹೆಚ್ಚು ಮಹಿಳೆಯರು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡರು.
ಮುರುಗೇಶನ್ ಅವರು ಹಗ್ಗವನ್ನು ತಯಾರಿಸುವ ಮತ್ತು ಅದನ್ನು ನೇಯುವ ಸ್ವಯಂಚಾಲಿತ ಯಂತ್ರವನ್ನು ಸಹ ವಿನ್ಯಾಸಗೊಳಿಸಿದ್ದಾರೆ. ಅವರು ಶೀಘ್ರದಲ್ಲೇ ಉತ್ಪನ್ನಗಳನ್ನು ರಫ್ತು ಮಾಡಲಾರಂಭಿಸಿದರು
ನನ್ನ ಉತ್ಪನ್ನಗಳನ್ನು ನಾವು ಯಾವ ಬೆಲೆಗೆ ಮಾರಾಟ ಮಾಡಬೇಕೆಂದು ಗ್ರಾಹಕರು ನನ್ನನ್ನು ಕೇಳುತ್ತಿದ್ದಾರೆ! ಯಾರೂ ರೈತನಿಂದ ಬೆಲೆಯನ್ನು ಕೇಳುವುದಿಲ್ಲ ಇದು ಅದ್ಭುತವಾಗಿದೆ
ಮುರುಗೇಶನ್ ಅವರ ಉತ್ಪನ್ನಗಳು ಜೈವಿಕ ವಿಘಟನೀಯ ಮತ್ತು ಪ್ಲಾಸ್ಟಿಕ್‌ಗೆ ಕಡಿಮೆ ದರದ ಪರ್ಯಾಯವಾಗಿವೆ. ಅವರು ತಮ್ಮ ಕೃಷಿ ಆವಿಷ್ಕಾರಕ್ಕಾಗಿ ಹಲವಾರು ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಅವರು ಈಗ ಈ ಪ್ರಕ್ರಿಯೆಯಲ್ಲಿ ಜನರಿಗೆ ತರಬೇತಿ ನೀಡುತ್ತಾರೆ ಮತ್ತು ಸರ್ಕಾರಕ್ಕಾಗಿ ತಾವೇ ಯಂತ್ರಗಳನ್ನು ತಯಾರಿಸುತ್ತಾರೆ.
2021 ರಲ್ಲಿ, ಪ್ರಧಾನಿ ಮೋದಿ ರವರು ಮನ್ ಕೀ ಬಾತ್‌ನಲ್ಲಿ ತ್ಯಾಜ್ಯವನ್ನು ಸಂಪತ್ತಾಗಿ ಪರಿವರ್ತಿಸಲು ಮತ್ತು ರೈತರಿಗೆ ಹೆಚ್ಚುವರಿ ಆದಾಯಕ್ಕೆ ದಾರಿ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ಶ್ಲಾಘಿಸಿದರು.



# ಮನ್ ಕೀ ಬಾತ್

## ಸಂಪುಟ 3

ಮನ್ ಕೀ ಬಾತ್‌ನ ಮೂರನೇ ಸಂಚಿಕೆಯು ತಮ್ಮ ಸುತ್ತಮುತ್ತಲಿನ ಜನರ ಬದುಕನ್ನು ಉತ್ತಮಗೊಳಿಸಲು ಶ್ರಮಿಸುತ್ತಿರುವ ವಿವಿಧ ರಂಗಗಳಲ್ಲಿ ಸಕ್ರಿಯರಾಗಿರುವ ನಾಗರಿಕರ ಬಗ್ಗೆ ಬೆಳಕನ್ನು ಚೆಲ್ಲುತ್ತದೆ.

ಕೋವಿಡ್-19 ಮಾಹಾಮಾರಿಯ ಸಂದರ್ಭದಲ್ಲಿ ಶ್ರೀನಗರದ ದಾಲ್ ಸರೋವರದ ಜನ ಕೋವಿಡ್ ರೋಗಕ್ಕೆ ತುತ್ತಾದಾಗ ತಾರಿಖ್ ಅಹ್ಮದ್ ದೋಣಿಯೊಂದನ್ನು ಆಂಬುಲೆನ್ಸ್ ಆಗಿ ಮಾರ್ಪಡಿಸಿ ಜನರನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದ.

ಅರುಣಾಚಲದ ಮಾಲಿಂಗ ಗೊಂಬು ನಶಿಸಿ ಹೋಗುತ್ತಿದ್ದ ಮೊನ್  ಶುಗು ಎಂಬ ಸಾವಿರ ವರ್ಷದ ಹಿಂದಿನ ಕಾಗದ ತಯಾರಿಕಾ ವಿಧಾನಕ್ಕೆ ಮರುಜೀವ ನೀಡಿ ಅನೇಕರಿಗೆ ಉದ್ಯೋಗವನ್ನು ಕಲ್ಪಿಸಿದ.

ಸಮುದ್ರ ಮಟ್ಟದಿಂದ 14,000 ಅಡಿ ಮೇಲೆ ಕಲ್ಲಂಗಡಿ ಹಣ್ಣುಗಳನ್ನು ಬೆಳೆಯುವುದರ ಬಗ್ಗೆ ನೀವು ಎಂದದಾರೂ ಕೇಳಿದ್ದೀರಾ? ಲಡಾಕ್ನ ಉರ್ಗೇನ್ ಫುಂಟ್ಸಾಗ್ ಎಂಬ ಪ್ರಯೋಗಶೀಲ ರೈತ ಅದನ್ನು ಮಾಡಿ ತೋರಿಸಿದ್ದಾನೆ.

ಅಸಾಧಾರಣ ಕೆಲಸಗಳನ್ನು ಮಾಡಿದ ಸಾಧಾರಣ ವ್ಯಕ್ತಿಗಳ ಬಗೆಗಿನ ಈ ಘಟನೆಗಳನ್ನು  ಪ್ರಧಾನಿ ಮೋದಿಯವರ  ಜನಪ್ರಿಯ ರೆಡಿಯೋ ಕಾರ್ಯಕ್ರಮ ಮನ್ ಕೀ ಬಾತ್’ನಿಂದ ಆಯ್ದು ಆಯ್ದುಕೊಳ್ಳಲಾಗಿದೆ.



₹90

www.amarchitrakatha.com
ISBN 978-81-19242-93-1
9 788119 242931